| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1062/2014**

ಪಿಡ್ಬ್ಲೂಃ 3 ಸಿಡ್ಲ್ಯೂಃ 5

ಸಾಕ್ಷಿದಾರನ ಹೆಸರು : ಗೋವಿಂದ ಶೆಟ್ಟಿ
ತಂದೆಯ ಹೆಸರು : ರಾಮಣ್ಣ ಶೆಟ್ಟಿ
ಪ್ರಾಯ : 72 ವರ್ಷ
ಉದ್ಯೋಗ : ಕೃಷಿ
ವಾಸ : ಅಲೆವೂರು, ಉಡುಪಿ

ದಿನಾಂಕ 26.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

2 ನೇ ಆರೋಪಿಯ ಪರಿಚಯ ಇದೆ. 1 ನೇ ಆರೋಪಿಯ ಪರಿಚಯ ಇಲ್ಲ.

ನನ್ನ ಹೆಸರಿನಲ್ಲಿ ಅಪ್ಪಾಚೆ ಬೈಕ್ ಇದೆ. ಅದನ್ನು ನನ್ನ ಮಗ ಗುರುಪ್ರಸಾದ್ ಉಪಯೋಗಿಸುತ್ತಿದ್ದ. 2 ನೇ ಆರೋಪಿ ಮತ್ತು ನನ್ನ ಮಗ ಒಟ್ಟಿಗೆ ಶಾಲೆಗೆ ಹೋಗುತ್ತಿದ್ದರು. ನನ್ನ ಬೈಕ್ ನ್ನು 2 ನೇ ಆರೋಪಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿದೆ. ಅವನು ನಮ್ಮ ಮನೆಗೆ ಬಂದು ತೆಗೆದುಕೊಂಡು ಹೋಗಿರುತ್ತಾನೆ. ನನ್ನ ಬೈಕ್ ನ್ನು ಯಾರು ಉಪಯೋಗಿಸುತ್ತಿದ್ದರು ಎಂದು ಗೊತ್ತಿಲ್ಲ. ಸ್ವಲ್ಪ ದಿನದ ನಂತರ 2 ನೇ ಆರೋಪಿ ಉಪಯೋಗಿಸುತ್ತಿದ್ದಾನೆ ಎಂದು ಗೊತ್ತಾಯಿತು.

2 ನೇ ಆರೋಪಿ ಕಳ್ಳತನ ಮಾಡಲು ನನ್ನ ಬೈಕನ್ನು ಉಪಯೋಗಿಸುತ್ತಿದ್ದ, ಆದರೆ ಆ ವಿಷಯ ನನಗೆ ತಿಳಿದಿರಲಿಲ್ಲ. ಮತ್ತೆ ಸದ್ರಿ ವಿಚಾರ ನನಗೆ ತಿಳಿಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2 ನೇ ಆರೋಪಿ ನನ್ನ ಮಗ ಗುರುಪ್ರಸಾದ್ ರವರ ಕ್ಲಾಸ್ ಮೇಟ್ ಆಗಿರುತ್ತಾನೆ ಎಂದರೆ ಸರಿ. ಅಲ್ಲದೆ 80 ಬಡಗಬೆಟ್ಟಿನ 1 ನೇ ಆರೋಪಿ ಕೂಡಾ ನನಗೆ ಪರಿಚಯದವನಾಗಿರುತ್ತಾನೆ ಎಂದರೆ ಸರಿಯಲ್ಲ. ಆತ ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದ ಎಂದರೆ ಸರಿಯಲ್ಲ. 2 ನೇ ಆರೋಪಿ ಬರುತ್ತಿದ್ದ. 1 ಮತ್ತು 2 ನೇ ಆರೋಪಿ ಗೆಳೆಯರಾಗಿದ್ದರು ಎಂದರೆ ಗೊತ್ತಿಲ್ಲ. ಈ ಘಟನೆಯ ಒಂದುವರೆ ತಿಂಗಳ ಹಿಂದೆ ಒಂದು ದಿನ 1 ನೇ ಆರೋಪಿ ತನ್ನ ಗೆಳೆಯನೊಂದಿಗೆ ನಮ್ಮ ಮನೆಗೆ ಬಂದು 80 ಬಡಗಬೆಟ್ಟುವಿಗೆ ಹೋಗಿ ಬರಲು ಬೈಕ್ ಬೇಕು ಎಂದು ಕೇಳಿದನು, ಆತನಿಗೆ ನನ್ನ ಬೈಕನ್ನು ನೀಡಿದೇನು ಎಂದರೆ ಸರಿಯಲ್ಲ. ಆತ ಮಣಿಪಾಲಕ್ಕೆ ಹೋಗಿ ಬೈಕನ್ನು 80 ಬಡಗಬೆಟ್ಟುವಿನಲ್ಲಿ ತನ್ನ ಮನೆಯಲ್ಲಿ ಇಟ್ಟು ನನಗೆ ಫೋನ್ ಮುಖೇನ ಒಂದೆರಡು ದಿನಗಳಲ್ಲಿ ಬೈಕ್ ನ್ನು ವಾಪಸ್ಸು ತರುತ್ತೇನೆ ಎಂದು ಹೇಳಿದನು ಎಂದರೆ ಸರಿಯಲ್ಲ. ದಿಃ23.09.2011 ರ ದಿನಪತ್ರಿಕೆಯಲ್ಲಿ ಹೆಬ್ರಿ ಪೊಲೀಸರು 2 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ವಶದಲ್ಲಿದ್ದ ಕೆಎ-20-ವೈ 3932 ಬೈಕ್ ನ್ನು ವಶಪಡಿಸಿಕೊಂಡಿರುವ ಬಗ್ಗೆ ಓದಿ ತಿಳಿಯಿತು ಎಂದರೆ ಸರಿ. ಸದ್ರಿ ಬೈಕನ್ನು 1 ನೇ ಆರೋಪಿ ತನ್ನ

ಗೆಳೆಯನೊಂದಿಗೆ ಕೊಂಡು ಹೋಗಿರುವುದಾಗಿದೆ ಎಂದರೆ ಸರಿಯಲ್ಲ. ಸದ್ರಿ 1 ಮತ್ತು 2 ನೇ ಆರೋಪಿ ಸೇರಿಕೊಂಡು ನನ್ನ ಬೈಕನ್ನು ಉಪಯೋಗಿಸಿ ದಿಃ05.09.2011 ಹಾಗೂ ದಿಃ12.09.2011 ಮತ್ತು 16.09.2011 ರಂದು ಸದ್ರಿ ಮೋಟಾರು ಸೈಕಲ್ ನಲ್ಲಿ ಹೆಬ್ರಿಯ ಕುಚ್ಚೂರು ಮತ್ತು ಕಳ್ತತೂರು ಮತ್ತು ಕಾರ್ಕಳದ ಕಾಂತವರದ ಬಾರಾಡಿ ಎಂಬಲ್ಲಿ ಬೈಕ್ ಸವಾರಿ ಮಾಡುತ್ತ ರೆಸ್ತೆಯಲ್ಲಿ ಹೋಗುತ್ತಿರುವ ಒಂಟಿ ಮಹಿಳೆಯರ ಕುತ್ತಿಗೆಯಿಂದ ಚಿನ್ನದ ಆಭರಣಗಳನ್ನು ಎಳೆದು ತೆಗೆದು ಸುಲಿಗೆ ಮಾಡಿದ್ದು ತಿಳಿಯಿತು ಎಂದರೆ ಸರಿ. ಈ ಬಗ್ಗೆ ದಿಃ22.10.2011 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದ್ರಿ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> 1 ನೇ ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ನನಗೆ 1 ನೇ ಆರೋಪಿ ನನಗೆ ಬಂದಿರುವುದಿಲ್ಲ ಮತ್ತು ಅವರ ಪರಿಚಯ ಇಲ್ಲ. ಈ ಪ್ರಕರಣಕ್ಕೆ 1 ನೇ ಆರೋಪಿ ಭಾಗಿಯಾಗಿರುವ ಬಗ್ಗೆ ಗೊತ್ತಿರುವುದಿಲ್ಲ. ಪೊಲೀಸರ ಮುಂದೆ ನಾನು 1 ನೇ ಆರೋಪಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ಹೇಳಿಕೆ ನೀಡಿರುವುದಿಲ್ಲ. 1 ನೇ ಆರೋಪಿ ಹೆಬ್ರಿ ಕುಚ್ಚೂರು, ಕಳ್ತ್ತೂರು , ಕಾರ್ಕಳದ ಕಾಂತವರದ ಬಾರಾಡಿಯಲ್ಲಿ ಕಳ್ಳತನ ಮಾಡಿದ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ